

# ಗಾಂಧಿ ತಾತ





ಗಾಂಧಿ ತಾತ ರಾಷ್ಟ್ರಪಿತ
ಭಾರತಕ್ಕೆ ಜೀವದಾತ
ನಗೆಯ ಅಸ್ತ್ರ ಬೀರೆ ನೇತ
ಬಿಳಿಯ ದೊರೆ ತಾನು ಸೋತ ॥

ಜನರ ಕಷ್ಟ ಕಂಡುಕೊಂಡು
ಅಂಗಿ ಕೂಡ ಕಳಚಿದ
ಬಡವರಲ್ಲಿ ಸೇರಿಕೊಂಡು
ಸರಳ ಬದುಕ ನಡೆಸಿದ ॥

ಮಿತ್ರನಿರಲಿ ಶತ್ರುವಿರಲಿ
ಹಿಂಸೆಯೆಂಬ ಮಾತೆ ಇಲ್ಲ
ಪುಟ್ಟ ಮಗು ಕಂಡರವಗೆ
ಬಾಯಿ ತುಂಬ ಬೆಲ್ಲ ॥

ಸತತ ನಗುತ ಎಲ್ಲರೊಂದೆ
ಎನುತ ಬದುಕಿದ
ನಗೆಯ ಬಲೆಯ ಬೀಸಿ ಬೀಸಿ
ಆಂಗ್ಲರನ್ನು ಜಯಿಸಿದ ॥

ಟಿ.ಎಸ್. ನಾಗರಾಜ ಶೆಟ್ಟಿ
(ಸಮಗ್ರ ಮಕ್ಕಳ ಕವಿತೆಗಳು)

10



# ಅತಿ ಆಸೆ ಗತಿ ಕೇಡು

223

**ಸೂಚನೆ : ಶಿಕ್ಷಕರು ಕಥೆಯನ್ನು ಹೇಳಿದ ನಂತರ ಕೆಳಗೆ ನೀಡಿರುವ ಪ್ರಶ್ನೆಗಳನ್ನು ಈ ಹಂತಕ್ಕೆ ಬಂದ ಮಕ್ಕಳಿಗೆ ಕೇಳುವುದು.**



ಭದ್ರಮ್ಮನ ಮನೆಯಲ್ಲಿ ಕಟ್ಟಿರುವೆ ಮತ್ತು ಕೆಂಪಿರುವೆ ವಾಸಿಸುತ್ತಿದ್ದವು. ಆದರೆ ಕಟ್ಟಿರುವೆಗೆ ಬಹಳ ಅಹಂಕಾರವಿತ್ತು. ಯಾರ ಮಾತನ್ನು ಅದು ಕೇಳುತ್ತಿರಲಿಲ್ಲ.

ಒಂದು ದಿನ ಕಟ್ಟಿರುವೆ ಮತ್ತು ಕೆಂಪಿರುವೆಗೆ ಭದ್ರಮ್ಮನ ಸಕ್ಕರೆ ಪಾತ್ರೆ ಕಣ್ಣಿಗೆ ಬಿತ್ತು. 'ಹಾಯ್, ಇವತ್ತು ಆನಂದದಿಂದ ಹೊಟ್ಟೆ ತುಂಬಿಸಿಕೊಳ್ಳುಬಹುದು' ಎಂದು ಕೆಂಪಿರುವೆ ಸಂತೋಷದಿಂದ ಕೂಗಿ ಕೊಂಡಿತು. ಆ ಬಳಿಕ ಅವುಗಳು ಉಳಿದ ಇರುವೆಗಳ ಜೊತೆ ಸೇರಿ ಸಕ್ಕರೆ ಭರಣಿಗೆ ಇಳಿದವು. ಹೊಟ್ಟೆ ತುಂಬಾ ಸಕ್ಕರೆ ತಿಂದ ಬಳಿಕೆ ಕೆಂಪಿರುವೆ ಉಳಿದ ಇರುವೆಗಳ ಬಳಿ ಹೇಳಿತು. 'ಇನ್ನು ನಾವು ಹೋಗೋಣ, ಭದ್ರಮ್ಮ ನೋಡಿದರೆ ನಮ್ಮನ್ನೆಲ್ಲಾ ಕೊಂದು ಹಾಕುತ್ತಾಳೆ' ಕೆಂಪಿರುವೆ ಮಾತು ಕೇಳಿದ ಉಳಿದ ಇರುವೆಗಳು ಅಲ್ಲಿಂದ ಹೊರಟಾಗ ಕಟ್ಟಿರುವೇ 'ನೀವೆಲ್ಲಾ ಹೋಗಿ, ನಾನು ಈ ಸಕ್ಕರೆ ಪಾತ್ರೆಯಲ್ಲಿ ವಾಸಿಸಲು ನಿರ್ಧರಿಸಿದ್ದೇನೆ' ಎಂದು ಹೇಳಿತು.

'ಅದು ಬಹಳ ಅಪಾಯ' ಎಂದು ಕೆಂಪಿರುವೆ ಎಚ್ಚರಿಸಿತು. 'ಯಾವುದೇ ಅಪಾಯವಿಲ್ಲಾಂತ ನನಗೆ ಗೊತ್ತು, ನನ್ನ ಬಗ್ಗೆ ನೀವು ಯೋಚಿಸ ಬೇಡಿ' ಕಟ್ಟಿರುವೆ ತನ್ನ ಹಠವನ್ನು ಬಿಡಲಿಲ್ಲ.

ಸ್ವಲ್ಪ ಹೊತ್ತಲ್ಲೆ ಭದ್ರಮ್ಮ ಬಂದಳು. ಆ ಬಳಿಕ ಟೀ ಮಾಡಲು ಸಕ್ಕರೆಯನ್ನು ಕುದಿಯುವ ನೀರಿಗೆ ಹಾಕಿದಳು. ಆ ಸಕ್ಕರೆಯೊಳಗೆ ಕಟ್ಟಿರುವೆಯೂ ಸೇರಿ ಕೊಂಡಿತ್ತು. ಬಿಸಿ ನೀರಿನೊಳಗೆ ಬಿದ್ದಾಗ ಕಟ್ಟಿರುವೆಯ ಶರೀರವೆಲ್ಲಾ ಬೆಂದು ಹೋಯಿತು.

1. ಇರುವೆಗಳು ಎಲ್ಲಿ ವಾಸಿಸುತ್ತಿದ್ದವು ?
2. ಕೆಂಪಿರುವೆಗೆ ಏಕೆ ಸಂತೋಷವಾಯಿತು ?
3. ಎಲ್ಲ ಇರುವೆಗಳು ಸಕ್ಕರೆ ತಿನ್ನಲು ಎಲ್ಲಿಗೆ ಬಂದವು ?
4. ಕಟ್ಟಿರುವೆ ಏನೆಂದು ನಿರ್ಧರಿಸಿತು ?
5. ಕೆಂಪಿರುವೆ ಎಚ್ಚರಿಸಲು ಕಾರಣವೇನು ?
6. ಕೆಂಪಿರುವೆಯ ಎಚ್ಚರಿಕೆಗೆ ಕಟ್ಟಿರುವೆ ಯಾವ ಮಾತನ್ನು ಹೇಳಿತು ?
7. ಕಟ್ಟಿರುವೆ ಯಾವಾಗ ತನ್ನ ಪ್ರಾಣವನ್ನು ಕಳೆದು ಕೊಂಡಿತು ?

10



# ಕಲಿಕಾಂಶ

224

**ಸಾಮರ್ಥ್ಯ :**

- ❖ ಹೇಳಿದ ಪದ್ಯದಲ್ಲಿನ ಮುಖ್ಯ ವಿಷಯಗಳನ್ನು ಗುರ್ತಿಸುವುದು.
- ❖ ಪದ್ಯವನ್ನು ಆಲಿಸಿದ ನಂತರ ಏಕೆ ? ಎಂಬ ಪ್ರಶ್ನೆಗೆ ಉತ್ತರಿಸುವುದು.
- ❖ ಪದ್ಯವನ್ನು ಓದಿದ ಮೇಲೆ ಯಾರು ? ಯಾವಾಗ ? ಎಲ್ಲಿ ? ಏನು ? ಏಕೆ ? ಎಂಬ ಪ್ರಶ್ನೆಗಳಿಗೆ ಉತ್ತರಿಸುವುದು.

**ಸೂಚನೆಗಳು :**

- ❖ ಕೊಟ್ಟಿರುವ ಪದ್ಯವನ್ನು ಲಾವಣಿಯ ಧಾಟಿಯಲ್ಲಿ ರಾಗವಾಗಿ, ಭಾವ ಪೂರ್ಣವಾಗಿ ಹಾಡುವುದು.
- ❖ ವಿದ್ಯಾರ್ಥಿಗಳು ಶಿಕ್ಷಕರನ್ನು ಅನುಸರಿಸಿ, ತಪ್ಪಿಲ್ಲದಂತೆ ಸ್ಪಷ್ಟವಾಗಿ, ರಾಗವಾಗಿ ಹಾಡುವುದನ್ನು ಖಚಿತ ಪಡಿಸಿ ಕೊಳ್ಳವುದು.
- ❖ ಗೊತ್ತು ಪಡಿಸಿದ ಐದು ಕಲಿಕಾಂಶಗಳನ್ನು ಆಧರಿಸಿ (ನಿರರ್ಗಳ ಓದು, ವಾಕ್ಯ ರಚನೆ, ಪ್ರಶ್ನೋತ್ತರ, ಭಾಷಾ ಚಟುವಟಿಕೆ ಮತ್ತು ಭಾಷಾಭ್ಯಾಸ) ಅರ್ಥೈಸುವುದರ ಜೊತೆಗೆ ಅನುಕ್ರಮವಾಗಿ ಅಭ್ಯಾಸದಲ್ಲಿ ತೊಡಗಲು ಮಕ್ಕಳನ್ನು ಅಣಿಗೊಳಿಸುವುದು.

10



# ಕಲಿಕಾಂಶ
# ಕಿತ್ತೂರು ಚೆನ್ನಮ್ಮ

224

ಕೇಳಿರಿ ಮಕ್ಕಳೆ ನಾಡಿನ ಪುತ್ರರೆ
ಕೇಳಿರಿ ಹೇಳುವೆ ಮಾತೊಂದ ।
ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ
ಕಿತ್ತೂರು ರಾಣಿಯ ಕಥೆಯೊಂದ ॥

ಬೆಳಗಾಂ ಜಿಲ್ಲೆಯ ಕಾಕರೆಯಲ್ಲಿ
ವೀರ ಪುತ್ರಿಯು ಜನಿಸಿಹಳು ।
ದೂಳಪ್ಪ ದೇಸಾಯಿ ಪದ್ಮಾವತಿಯ
ಕುಲಪುತ್ರಿಯೇ ಚೆನ್ನಮ್ಮ ॥

ತಂದೆಯೊಡನೆ ಪುರುಷವೇಷದಿ
ಬೇಟೆಗೆ ಕಾಡಿಗೆ ಹೋಗಿಹಳು ।
ಕತ್ತಿ ವರಸೆ ಬಿಲ್ಲು ಬಾಣ
ಕುದುರೆ ಸವಾರಿಯ ಕಲಿತಿಹಳು ॥

ಕಿತ್ತೂರು ದೊರೆ ಮಲ್ಲಸರ್ಜನ
ಪ್ರೀತಿಯ ಮಡದಿ ಎನಿಸಿಹಳು ।
ಮಲ್ಲಸರ್ಜನ ಮರಣ ನಂತರ
ಕಿತ್ತೂರು ರಾಣಿಯೇ ಆಗಿಹಳು ॥

ಕಿತ್ತೂರು ನಾಡಿನ ಸ್ವಾತಂತ್ರ್ಯಕ್ಕಾಗಿ
ಬ್ರಿಟಿಷರ ವಿರುದ್ಧ ಹೋರಾಡಿಹಳು ।
ಥ್ಯಾಕರೆಯನ್ನು ಸೋಲಿಸಿ ಅವಳು
ವೀರವನಿತೆಯೇ ಎನಿಸಹಳು ॥

